ಕೊಡವಿಕೊಂಡು ಚಟುವಟಿಕೆಯಿಂದ ಓಡಾಡುವ ಸಂಭ್ರಮ. ಗರತಿಯರು ಮನೆಗೆಲಸ ಪೂರೈಸಿ ಗುಡಿಗೆ ಧಾವಿಸುವ ಗಡಿಬಿಡಿ.

★★★

ದಿಬ್ಬೂರಿನ ಹನುಮನ ಗುಡಿ ಪ್ರಾಚೀನಕಾಲದಲ್ಲಿ ಕಟ್ಟಿದ ವಾಸ್ತುವೇನಲ್ಲ. ಹನ್ನೊಂದು, ಹನ್ನೆರಡು ವರ್ಷಗಳ ಮಳೆಗಾಲ ಕಂಡಿದ್ದು. ನೀಲಕಂಠ ಶಾಸ್ತ್ರಿಗಳ ಕನಸಿನಲ್ಲಿ ಸಾಕ್ಷಾತ್ ಮಾರುತಿ ಕಾಣಿಸಿಕೊಂಡು, 'ನಿಮ್ಮೂರಿಗೆ ಕರೆಸಿಕೋ...' ಅಂದಿದ್ದು ಕರ್ಣಾಕರ್ಣಿಕೆಯಾಗಿ ಹರಡಿ ತಣ್ಣಗಿದ್ದ ಊರಿನಲ್ಲಿ ರೋಮಾಂಚನದ ಅಲೆಯನ್ನು ಎಬ್ಬಿಸಿತ್ತು. ಅರವತ್ತೈದರ ಸಮೀಪದ ಶಾಸ್ತ್ರಿಗಳಿಗೆ ಹೀಗೆ ಕತೆ ಕಟ್ಟಿ ಹೇಳಬೇಕಾದ ಅವಶ್ಯಕತೆಯೇನಿಲ್ಲ ಎಂದು ಅವರ ಸ್ವಭಾವ, ಸಚ್ಚಾರಿತ್ರ್ಯ ಬಲ್ಲವರ ಅಭಿಪ್ರಾಯ. ಶಾಸ್ತ್ರಿಗಳು ತೀರಾ ಅನುಕೂಲಸ್ಥರ ಪೈಕಿ ಅಲ್ಲದಿದ್ದರೂ ಉಂಡುಡುವುದಕ್ಕೆ ಕಮ್ಮಿ ಇಲ್ಲದಷ್ಟು ವರಮಾನವನ್ನು ದೇವರು ಅವರಿಗೆ ಕರುಣಿಸಿದ್ದ. ಶಾಸ್ತ್ರಿಗಳ ಮುಖ್ಯ ವೃತ್ತಿ ಪುರೋಹಿತಿಕೆ. ವ್ರತ, ಕತೆ, ಪೂಜೆ ಎಂದು ಊರಿನ ಮನೆ ಮನೆ ಹೊಕ್ಕು ಹೊರಡುವ ಅವರು ಜಾತ್ಯಸ್ಥರ ಮನೆಯಲ್ಲಿ ನಡೆಯುವ ಸಾವುನೋವುಗಳ ಸಂದರ್ಭದಲ್ಲಿ ಕರ್ಮಾಂತರಗಳನ್ನು ಸಾಂಗವಾಗಿ ನಡೆಸಿಕೊಡುವುದರಲ್ಲೂ ಪಾರಂಗತರು. ಇವೆಲ್ಲದರ ಜೊತೆ ಲೌಕಿಕಕ್ಕೆ ಬೇಕಾಗುವಷ್ಟು ಜ್ಯೋತಿಷ್ಯಜ್ಞಾನವನ್ನು ಸಂಪಾದಿಸಿಕೊಂಡಿದ್ದಾರೆ. ಹೆಣ್ಣುಗಂಡುಗಳ ಜಾತಕಗಳ ಮೇಳಾಮೇಳಿ ನೋಡುವುದು, ಯಾರ ಮನೆಯಲ್ಲಾದರೂ ಏಳಿಗೆಯಾಗದೆ ಕಾಯಿಲೆಕಸಾಲೆ, ಸಾಲಸೋಲ ಎಂದು ಪೆಚ್ಚುಮೋರೆ ಹಾಕಿಕೊಂಡು ಬರುವವರ ಜಾತಕ ಇದ್ದರೆ ಜಾತಕ ನೋಡಿ ಇಂತಾ ದೆಸೆ, ಇಂತಹ ಭುಕ್ತಿ ನಡೆಯುತ್ತಿದೆ ಎಂದು ಲೆಕ್ಕಾಚಾರ ಹಾಕಿ, ದೋಷವಿದ್ದರೆ ತಕ್ಕ ಪರಿಹಾರ ಸೂಚಿಸುವುದು, ಅದನ್ನು ಸ್ವತಃ ಮುತುವರ್ಜಿ ವಹಿಸಿ ಪೂರೈಸಿಕೊಡುವುದು, ಹೀಗೆ ಶಾಸ್ತ್ರಿಗಳು ಅವರಿಗೆ ವಯಸ್ಸಾಗುತ್ತಿರುವುದು ಅರಿವಿಗೇ ಬರದಷ್ಟು ತುಂಬು ಚಟುವಟಿಕೆಯ ಜೀವ. ಜಾತಕ ಇಲ್ಲದಿದ್ದವರಿಗೂ ಪ್ರಶ್ನಾಕಾಲ ಪರಿಶೀಲಿಸಿ ಪರಿಹಾರ ಹೇಳುವವರು. ನಂಬುವವರ ನಂಬುಗೆಯಿಂದ ಶಾಸ್ತ್ರಿಗಳ ಆದಾಯಕ್ಕೆ ಕೊರೆ ಎಂಬುದಿಲ್ಲ. ಅವರ ಬಗ್ಗೆ ಗೌರವ ಭಾವನೆ ಅನೇಕರ ಮನಸ್ಸಲ್ಲಿ ಇದ್ದೇ ಇದೆ, ಅದರಲ್ಲೂ ಪ್ರಾಯದ ಪೊಗರು ಇಳಿದು ಮಾಗುತ್ತಾ ಬಂದವರಿಗೆ ಒಂದು ಮುಷ್ಟಿ ಹೆಚ್ಚು.

★★★

'ತಮಗೆ ಹೀಗೆಂದು ಮಾರುತಿರಾಯ ಕನಸಿನಲ್ಲಿ ಬಂದು ಅಪ್ಪಣೆ ಕೊಡಿಸಿದ್ದಾನೆ' ಎಂದಷ್ಟೇ ಆಪ್ತರೆನಿಸಿಕೊಂಡವರಲ್ಲಿ ಹೇಳಿಕೊಂಡಿದ್ದರೇ ವಿನಾ 'ಗುಡಿ ಕಟ್ಟಿಸಬೇಕು' ಎಂದು ಹಲವರಿದವರಲ್ಲ ಶಾಸ್ತ್ರಿಗಳು. ಯಾರದ್ದೋ ಕೈಕಾಲು ಹಿಡಿದು ಬೇಳೆ ಬೇಯಿಸಿಕೊಳ್ಳುವ ಜಾಯಮಾನ ಅವರದ್ದಲ್ಲ ಎಂದು ಅವರ ಸ್ವಭಾವವನ್ನು ಬಲ್ಲವರ ನಂಬುಗೆ. ಅವರು ಅತ್ಯುತ್ಸಾಹ ತೋರಿಸಲು ಹೋಗದೆ ತಮ್ಮಷ್ಟಕ್ಕೆ ತಣ್ಣಗಿದ್ದುಬಿಟ್ಟರು. ಊರಲ್ಲಿ ಅದಾಗಲೇ ಪುರಾತನವಾದ ಒಂದು ಗಣಪತಿ ದೇವಸ್ಥಾನ ಇತ್ತು. ಯಾರೋ ಪುಣ್ಯಾತ್ಮರು ಹಳೆಗಾಲದಲ್ಲಿ ಬಿಟ್ಟುಕೊಟ್ಟ ದತ್ತಿ ಜಮೀನು ಒಂದಿಷ್ಟಿತ್ತು. ಗಣಪತಿಯನ್ನು ನಂಬಿಕೊಂಡು, ಅಲ್ಲೇ ಹರಕೆ ಕಟ್ಟಿಕೊಂಡು, ಇಷ್ಟಾರ್ಥ ನೆರವೇರಿದರೆ ಹರಕೆ ತೀರಿಸಿಕೊಂಡು ಬದುಕುವುದು ಅಭ್ಯಾಸವಾಗಿದ್ದ ಆಸ್ತಿಕ ಮಹಾಶಯರಿಗೆ ಶಾಸ್ತ್ರಿಗಳಿಗೆ ಬಿದ್ದ ಕನಸಿನ ಕುರಿತಾಗಿ ಕೇಳಿದ ಮೇಲೆ ಮೈ ಜುಮುಗುಟ್ಟಿತ್ತು. ಟೀವಿಯಲ್ಲಿ ನಿತ್ಯಭವಿಷ್ಯ ನೋಡಿದ ಅನಂತರ ದಿನದ ಕೆಲಸಕಾರ್ಯ ಆರಂಭಿಸುವ ಅಭ್ಯಾಸ ಮಾಡಿಕೊಂಡಿದ್ದ ಕೆಲವರಿಗೆ ಸಾಡೇಸಾತಿಯ ಕುರಿತಾಗಿ ಸಾಮಾನ್ಯಜ್ಞಾನ ತನ್ನಷ್ಟಕ್ಕೆ ಲಭ್ಯವಾಗಿತ್ತು. ಅನ್ಯಗ್ರಹಗಳು ರಾಶಿಯಿಂದ ರಾಶಿಗೆ ಸಂಚರಿಸುವ ಕಾಲವನ್ನು ಹೆಚ್ಚು ಗಂಭೀರವಾಗಿ ತೆಗೆದುಕೊಳ್ಳದಿದ್ದ ಮಂದಿಗೆ ಶನಿಯ ಪ್ರಭಾವ ತಮ್ಮ ರಾಶಿಯ ಮೇಲೆ ಉಂಟಾಗುತ್ತದೆಯೆಂದರೆ ಉಗುಳು ನುಂಗಿಕೊಳ್ಳುವಂತಾಗುವ ಅನುಭವ. ಶನಿಯ